**<u>ಪತ್ರಿಕಾ ಪ್ರಕಟಣೆಗಾಗಿ ತಿದ್ದೋಲೆ</u>**

**<u>ದಿನಾಂಕ: 31 ಜನವರಿ, 2024</u>**

***

# ಅಕ್ವೇರಿಯಂ ನಿರ್ವಹಣೆ ಮತ್ತು ಅಲಂಕಾರಿಕ ಮೀನುಗಳ ಉತ್ಪಾದನೆಯ ಉಚಿತ ತರಬೇತಿಗೆ ಅರ್ಜಿ ಸ್ವೀಕರಿಸಲು ದಿನಾಂಕ ವಿಸ್ತರಣೆ

ಮಂಗಳೂರಿನ ಮೀನುಗಾರಿಕಾ ಕಾಲೇಜಿನ ಹೊಯ್ಗೆಬಜಾರ್‌ನ ಆವರಣದಲ್ಲಿರುವ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಪ್ರಾಯೋಜಿತ ಯೋಜನೆಯಾದ **'ಮೀನುಗಾರಿಕೆಯಲ್ಲಿ ಕೌಶಲ್ಯಾಭಿವೃದ್ಧಿ ಮತ್ತು ಸುರಕ್ಷತಾ ತರಬೇತಿ ಕೇಂದ್ರ'** ದಲ್ಲಿ ಈಗಾಗಲೆ ಫೆಬ್ರವರಿ 01 ರಿಂದ ಒಟ್ಟು 30 ದಿನಗಳವರೆಗೆ ಉಚಿತ ತರಬೇತಿ ಪಡೆಯಲು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ತರಬೇತಿಗೆ ಒಟ್ಟು 30 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದೆಂದು ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಈ ತರಬೇತಿಗೆ ನಿರುದ್ಯೋಗಿ ಪದವಿದರರು, ಕಾಲೇಜು ವ್ಯಾಸಂಗವನ್ನು ಮೊಟಕುಗೊಳಿಸಿರುವ ಯುವಕ-ಯುವತಿಯರು, ಸ್ವಉದ್ಯೋಗಾಂಕ್ಷಿಗಳು, ಸ್ವಯಿಚ್ಚೆಯಿಂದ ವ್ಯಾಪಾರ ಮಾಡುತ್ತಿರುವ ಅಥವಾ ವ್ಯಾಪಾರ ಮಾಡಬಯಸುವ ಕರ್ನಾಟಕ ಕರಾವಳಿಯ ನಿವಾಸಿಗಳಿಂದ ತರಬೇತಿಗೆ ಅರ್ಜಿಯನ್ನು ಸಲ್ಲಿಸಲು 25 ನೇ ಜನವರಿ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಮುಂದುವರೆದು, ಈ ತರಬೇತಿಗೆ ಅರ್ಜಿ ಸಲ್ಲಿಸಲು ದಿನಾಂಕವನ್ನು ಫೆಬ್ರವರಿ 10 ರವರೆಗೆ ಮುಂದೂಡಲಾಗಿದೆಯೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತರಬೇತಿಯ ಮುಖ್ಯ ಶಿರ್ಷಿಕೆಯಾದ ಅಕ್ವೇರಿಯಂ ಜೋಡಣೆ, ನಿರ್ವಹಣೆ, ಅಲಂಕಾರಿಕಾ ಮೀನುಗಳ ಸಾಕಣೆ, ಮರಿ ಉತ್ಪಾದನೆ, ಉದ್ಯಮಶೀಲತೆ, ಮಾರಾಟ, ಇತ್ಯಾದಿಗಳ ಬಗ್ಗೆ ಪ್ರಾತ್ಯಕ್ಷಿಕೆಯ ಮೂಲಕ ತರಬೇತಿ ನಡೆಲಾಗುವುದು.

ಆಸಕ್ತ ಪದವಿದರರು ಅಥವಾ ಪದವಿಯನ್ನು ಮೊಟಕುಗೊಳಿಸಿರುವ ಕರ್ನಾಟಕದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ನಿವಾಸಿಗಳಿಗೆ ಆದ್ಯತೆಯ ಮೇರೆಗೆ ಒತ್ತು ಕೊಟ್ಟು ಆಯ್ಕೆ ಮಾಡಲಾಗುವುದೆಂದು ತಿಳಿಸಲಾಗಿದೆ.

ಅದುದರಿಂದ ಮೇಲೆ ತಿಳಿಸಲಾದ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಫೆಬ್ರವರಿ 10 ರವರೆಗೆ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಸಕ್ತರು ಅರ್ಜಿಯನ್ನು ಕಾಲೇಜಿನ ವೆಬ್‌ಸೈಟ್: **www.cofm.edu.in** ಯಿಂದ ಡೌನ್‌ಲೋಡ್ ಮಾಡಿ ಇಮೇಲ್: **sdfstc2023@gmail.com** ಗೆ ಕಳುಹಿಸಲು ಕೋರಲಾಗಿದೆ. ಅರ್ಜಿಯನ್ನು ಫೆಬ್ರವರಿ 10 ರೊಳಗೆ ಕಳುಹಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ ಯೋಜನೆಯ ಸಂಯೋಜಕರು ಹಾಗೂ ಪ್ರಧಾನ ಸಂಶೋಧಕರನ್ನು ಮೊಬೈಲ್ ಸಂಖ್ಯೆ: 99169 24084 ಅಥವಾ 86186 60949 ಗೆ ಸಂಪರ್ಕಿಸಬಹುದಾಗಿದೆ.